ದಿನಾಂಕ 29.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-**

1985 ನೇ ಇಸವಿಯ ಕ್ರಯಪತ್ರದಲ್ಲಿನ ಚೆಕ್ಕುಬಂಧಿಯನ್ನು ಈಗ ನನಗೆ ಹೇಳಲು ಆಗುವುದಿಲ್ಲ. ಕ್ರಯಪತ್ರವನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿ ನಾನು ಅಸಲು ದಾವಾ ಸಂಖ್ಯೆ 38/77 ರ ತೀರ್ಪು ಮತ್ತು ಡಿಕ್ರಿಯನ್ನು ಓದಿರುತ್ತೇನೆ. ಡಿಕ್ರಿಯಲ್ಲಿ ನಮೂದಿಸಿದ್ದ ಸ್ವತ್ತಿನ ಚೆಕ್ಕುಬಂಧಿಯನ್ನು ಈಗ ನನಗೆ ಹೇಳಲು ಆಗುವುದಿಲ್ಲ. ಅಸಲು ದಾವಾ ಸಂಖ್ಯೆ 38/77 ಹಾಗೂ ಅಮಲ್ದಾರಿ ಪರಕರಣ ಸಂಖ್ಯೆ 67/79 ರಲ್ಲಿ ನಾನು ಪಕ್ಷಗಾರನಲ್ಲ. 1985 ನೇ ಇಸವಿಯಲ್ಲಿ ದಾವಾಸ್ವತ್ತಿನ ಜಮಾಬಂಧಿ ಗಣಪತಿಯವರ ಹೆಸರಿನಲ್ಲಿ ಇತ್ತು. 1985 ರಿಂದ 2020 ರವರೆಗೆ ದಾವಾಸ್ವತ್ತಿನ ಜಮಾಬಂಧಿ ಗಣಪತಿಯವರ ಹೆಸರಿನಲ್ಲಿ ಇತ್ತು. ಅಮಲ್ದಾರಿ ಪ್ರಕರಣದಲ್ಲಿ 6.62 ಎಕರೆ ಜಮೀನಿನ ಪೈಕಿ 1 ಎಕರೆ ಜಮೀನನ್ನು ಗಣಪತಿಯವರಿಗೆ ಬಿಟ್ಟುಕೊಡಲಾಯಿತು ಉಳಿದ 5 ಎಕರೆ 62 ಸೆಂಟ್ಸ್ ಜಾಗವನ್ನು ಮುತ್ತಣ್ಣ ಮತ್ತು ಅವರ ಸಹೋದರರಿಗೆ ಬಿಟ್ಟುಕೊಡಲಾಯಿತು.

1968 ನೇ ಇಸವಿಯ ಕ್ರಯಪತ್ರದ ಪ್ರಕಾರ 6 ಎಕರೆ 62 ಸೆಂಟ್ಸ್ ಜಾಗವನ್ನು ಗಣಪತಿಯವರು ಮುತ್ತಣ್ಣನಿಗೆ ಮಾರಾಟ ಮಾಡಿರುತ್ತಾರೆ. ನಾನು 1968 ನೇ ಇಸವಿಯ ಕ್ರಯಪತ್ರವನ್ನು ಓದಿರುವುದಿಲ್ಲ ಎಂದರೆ ಸರಿಯಲ್ಲ. 1968 ನೇ ಇಸವಿಯ ಕ್ರಯಪತ್ರದ ಚೆಕ್ಕು ಬಂಧಿಯಲ್ಲಿ 5 ಎಕರೆ ಜಮೀನನ್ನು ಮಾತ್ರ

ನಮೂದು ಮಾಡಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ನೆನಪಿಲ್ಲ. ನಿ.ಡಿ 1 ರ ಬಗ್ಗೆ ನನಗೆ ತಿಳುವಳಿಕೆ ಇರುವುದಿಲ್ಲ. 1979 ನೇ ಇಸವಿಯಲ್ಲಿ ಈ ದಾವೆಯ ವಾದಿಗಳಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂಬುದು ನನಗೆ ಗೊತ್ತಿಲ್ಲ. 1979 ನೇ ಇಸವಿಯಲ್ಲಿ ಗಣಪತಿಯವರು ಜೀವಂತವಾಗಿ ಇದ್ದರು. ಅಮಲ್ದಾರಿ ಪ್ರಕರಣದಲ್ಲಿ ದಾವಾಸ್ವತ್ತಿನ ಚೆಕ್ಕುಬಂಧಿಯನ್ನು ನಮೂದಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅಮಲ್ದಾರಿ ಪ್ರಕರಣ ಸಂಖ್ಯೆ 67/79 ರ ಅರ್ಜಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. 1979 ನೇ ಇಸವಿಯಲ್ಲಿ ಗಣಪತಿಯವರು ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ 2 ರಲ್ಲಿ ಗಣಪತಿಯವರು ಮೃತರಾಗಿರುವ ಬಗ್ಗೆ ನಮೂದು ಇದೆ ಎಂದರೆ ನನಗೆ ಆ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಗಣಪತಿಯವರ ತಂದೆಯ ಹೆಸರು ಕಾಳಯ್ಯ. ನಿ.ಡಿ 11 ರ ಪ್ರಕಾರ ಗಣಪತಿಯವರಿಗೆ ಚಿಕ್ಕಮಂಡೂರು ಗ್ರಾಮದಲ್ಲಿ 7 ಎಕರೆ 62 ಸೆಂಟ್ಸ್ ಜಾಗ ಇತ್ತು ಎಂದರೆ ಸರಿ. ಸರ್ವೆ ನಂ. 124 ರಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂಬುದು ನನಗೆ ಗೊತ್ತಿಲ್ಲ.

ವಾದಿಗಳು ಮತ್ತು ಪ್ರತಿವಾದಿ 6 ಮತ್ತು 7 ರವರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಎಂದರೆ ಸರಿ. ಪ್ರತಿವಾದಿ 6 ರವರು ತನ್ನ ಅಪ್ರಾಪ್ತ ವಯಸ್ಸಿನ ಸಹೋದರರ ಪರವಾಗಿ ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡ ವಿಚಾರ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ದಾವಾಸ್ವತ್ತುಗಳನ್ನು ಮುತ್ತಣ್ಣರವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ಸ್ವತ್ತನ್ನು

ಮಾರಾಟ ಮಾಡಲು ಹಕ್ಕು ಇಲ್ಲದೇ ಇದ್ದರೂ ಸಹಾ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದು, ಆ ಸ್ವತ್ತನ್ನು ಖರೀದಿಸಿದ ನನಗೆ ಅದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.